ಸಿ.ಸಿ.ಸಂಖ್ಯೆ: 92/2024

DW:2

**(ಇಂದು ದಿನಾಂಕ 05.05.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಶ್ರೀ ಎಂ ಬಿ ಫಿರಿಯಾದು ಪರ ವಕೀಲರಿಂದ :**

ನಾನು ಗಾರ್ಮೆಂಟ್ಸ್ ಅಂಗಡಿಯಲ್ಲಿ ಸೇಲ್ಸ್ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಪೂರ್ವದಲ್ಲಿ ಸಾಲವನ್ನು ತೆಗೆಸಿಕೊಡುವ ವ್ಯವಹಾರವನ್ನು ನಡೆಸಿಕೊಂಡಿದ್ದೆನು.

2. ನಾನು ಫಿರಿಯಾದುದಾರರಿಂದ ರೂ 50000/- ನ್ನು 2022ನೇ ಸಾಲಿನಲ್ಲಿ ಪಡೆದುಕೊಂಡಿರುತ್ತೇನೆ. ಸದ್ರಿ ಮೊತ್ತವನ್ನು ನಾನು ಫಿರಿಯಾದುದಾರರ ದಾಖಲಾತಿಗಳನ್ನು ಸರಿಪಡಿಸಿಕೊಡುವ ಸಲುವಾಗಿ ಅವರಿಂದ ಪಡೆದುಕೊಂಡಿರುತ್ತೇನೆ. ಫಿರಿಯಾದುದಾರರಿಂದ ನಾನು ಒಪ್ಪಿಕೊಂಡಂತಹ ದಾಖಲಾತಿಗಳನ್ನು ಸರಿಪಡಿಸಲು ಸಾಧ್ಯವಾಗದ ಕಾರಣ ನಾನು ಫಿರಿಯಾದುದಾರಿಂದ ಪಡೆದಂತಹ ರೂ 50000/- ಫಿರಿಯಾದುದಾರರಿಗೆ ಮರುಪಾವತಿಸಿರುತ್ತೇನೆ.

3. ಈ ಪ್ರಕರಣದಲ್ಲಿ ಹಾಜರುಪಡಿಸಿದ ಚೆಕ್ಕನ್ನು ನೀವು ಫಿರಿಯಾದುದಾರರಿಗೆ ಯಾವಾಗ ನೀಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಫಿರಿಯಾದುದಾರರಿಂದ ಹಣವನ್ನು ಪಡೆದ ಸಮಯದಲ್ಲಿಯೇ ನಾನು ಅವರಿಗೆ ಚೆಕ್ಕನ್ನು ನೀಡಿರುತ್ತೇನೆ. ನಿಪಿ.1 ಚೆಕ್ಕು 2023ನೇ ಸಾಲಿಗೆ ಸಂಬಂಧಿಸಿದ ಚೆಕ್ಕಾಗಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ಚೆಕ್ಕು 2022ನೇ ಸಾಲಿಗೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ನಿಪಿ.1ರ ಚೆಕ್ಕಿನಲ್ಲಿ ಕಂಡುಬರುವ ಬರವಣಿಗೆಯು ನಿಮ್ಮದಾಗಿರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿರುವ ಸಹಿಯು ನನ್ನದಾಗಿರುತ್ತದೆ.

4. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಫಿರಿಯಾದುದಾರರ ಬಳಿ ಇದ್ದಂತಹ ಚೆಕ್ಕು ಕಳೆದುಹೋಗಿರುತ್ತದೆ ಎಂದು ಫಿರಿಯಾದುದಾರರ ನಿಮ್ಮಲ್ಲಿ ಹೇಳಿರುತ್ತಾರೆ ಎಂದು ನೀವು ಸಾಕ್ಷ್ಯ ನುಡಿದಿದ್ದು , ಸದ್ರಿ ಚೆಕ್ಕು ಮಾನ್ಯಗೊಳ್ಳಬಾರದು ಎಂದು ಬ್ಯಾಂಕಿಗೆ ಅರ್ಜಿ ಸಲ್ಲಿಸಿದ್ದು ಇದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ. ಸದ್ರಿ ವಿಚಾರದ ಬಗ್ಗೆ

ನೀವು ಕಾವೂರು ಠಾಣೆಗೆ ದೂರು ನೀಡಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

5. ಚೆಕ್ಕು ಅಮಾನ್ಯಗೊಂಡಿರುತ್ತದೆ ಎಂದು ನಿಮಗೆ ಯಾವಾಗ ತಿಳಿದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ವಕೀಲರ ಒಂದುಪತ್ರ ಜಾರಿಯಾದಾಗ ತಿಳಿದಿರುತ್ತದೆ ಎನ್ನುತ್ತಾರೆ. ಚೆಕ್ಕು ಅಮಾನ್ಯಗೊಂಡ ಬಗ್ಗೆ ಬ್ಯಾಂಕಿನಿಂದ ನಿಮಗೆ ಮೆಸೇಜು ಬಂದಿರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ಬಂದಿರಬಹುದು ನಾನು ಅದನ್ನು ಗಮನಿಸಿರುವುದಿಲ್ಲ ಎನ್ನುತ್ತಾರೆ. ಚೆಕ್ ನಲ್ಲಿ ನಮೂದಿಸಿದ ಮೊತ್ತವನ್ನು ಪಾವತಿಸಬೇಕು ಎಂದುಹೇಳಿ ವಕೀಲರ ನೋಟೀಸು ಯಾವ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ.

6. ನನ್ನ ವಿರುದ್ಧ ಈ ನ್ಯಾಯಾಲಯದಲ್ಲಿ 2 ಚೆಕ್ಕು ಅಮಾನ್ಯ ಪ್ರಕರಣಗಳು ಇರುತದೆ. ಮತ್ತೊಂದು ಪ್ರಕರಣದಲ್ಲಿ ನಾನು ಜಾಮೀನು ಪಡೆದು ನ್ಯಾಯಾಲಯದ ಮುಂದೆ ಹಾಜರಾಗುತ್ತಿದ್ದೇನೆ.

7. ನನಗೆ ಜ್ಯೋತಿ ಚಂದ್ರ ಎನ್ನುವವರ ಪರಿಚಯ ಇರುವುದಿಲ್ಲ. ಸದ್ರಿ ಹೆಸರಿನವರು ನಿಮ್ಮ ವಿರುದ್ಧ ಮಂಗಳೂರಿನ 5ನೇ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಒಂದು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ .

**ಮುಂದುವರೆದ ಪಾಟೀ ಸವಾಲಿಗೆ ಫಿರಿಯಾದು ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಆಲಿಸಿ ನೀಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ ಎಂದರು.**

**ಪ್ರ,ದ.ನ್ಯಾದಂ. 8ನೇ ನ್ಯಾ, ಮಂಗಳೂರು**